248 (484) – ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯು ಗುರುತಿಸಿರುವ ಕೆರೆಗಳ ಸಂಖ್ಯೆ ಎಷ್ಟು ;

ಆ) ಅವುಗಳಲ್ಲಿ ಎಷ್ಟು ಕೆರೆಗಳನ್ನು ಇಲ್ಲಿಯವರೆಗೆ ಅಭಿವೃದ್ಧಿಪಡಿಸಲಾಗಿದೆ ಹಾಗೂ ಉಳಿದ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ;

ಇ) ಆರ್ಥಿಕ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯು ತಾಲ್ಲೂಕು ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಅನುದಾನದ ವಿವರಗಳೇನು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ)–

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿ ಬರುವ ಕೆರೆಗಳು ಯಾವುದೂ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ಅನುಷ್ಠಾನದ ಹಂತದಲ್ಲಿರುವ ಕಾಮಗಾರಿಗಳ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

249 (485) – ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಹಿತಿ ಸಿಂಧು ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ಎಷ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಒದಗಿಸಿಕೊಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ;

ಆ) 2005-06 ಮತ್ತು 2006-07ನೇ ಸಾಲಿನಲ್ಲಿ ಎಷ್ಟು ಶಾಲೆಗಳಿಗೆ ಸದರಿ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ ;

ಇ) ಗ್ರಾಮಾಂತರ ಪ್ರದೇಶದಲ್ಲಿರುವ ಶಾಲೆಗಳಿಗೆ ಪ್ರಥಮ ಆದ್ಯತೆ ನೀಡುವ ಮೂಲಕ ಆಧುನಿಕ ಶಿಕ್ಷಣದ ಸೌಕರ್ಯವನ್ನು ಪಡೆಯಲು ಅನುಕೂಲ ಮಾಡಿಕೊಡುವ ದಿಶೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)–

ಅ) ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಮಾಹಿತಿ ಸಿಂಧು ಕಾರ್ಯಕ್ರಮ ಕೇವಲ ಸರ್ಕಾರಿ ಪ್ರೌಢ ಶಾಲೆಗೆ ಮಾತ್ರ ಸೀಮಿತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 29 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು ಜಾರಿಗೊಳಿಸಲಾಗಿದೆ. ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 2001–02ನೇ ಸಾಲಿನಿಂದ 2005–06ನೇ ಸಾಲಿನವರೆಗೆ ಒಟ್ಟು 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು ಮಾಹಿತಿ ಸಿಂಧು ಯೋಜನೆಯಡಿ ನೀಡಲಾಗಿದೆ. ಪುನಃ 3 ವರ್ಷಗಳ ಅವಧಿಗೆ ಈ ಯೋಜನೆಯನ್ನು ಮುಂದುವರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಇ) ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಹಿಂದುಳಿದ ಜಿಲ್ಲೆ / ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆದ್ಯತೆ ಮೇರೆಗೆ ಆಯ್ಕೆ ಮಾಡಿ ಜಾರಿಗೊಳಿಸಲಾಗಿದೆ.

ANNEXURE

List of Mahithi Sindhu Schools of NIIT Ltd with Faculty Names - Dakshina Kannada

Sl No	SCH_CODE	SCH_NAME	ADDRESS	TALUK	DISTRICT	FACULTY NAME 1	FACULTY NAME 2
1	DK233C	GOVT HS	KOILA	BANTWALA	DAKSHINA KANNADA	HASANABBA	SUBRAMANYA
2	DK234A	GOVT HS	KODANGAI	BANTWALA	DAKSHINA KANNADA	SUNIL	BHAGYALAKSHMI
3	DK235B	GOVT HS	GOLTHA MAJALU	BANTWALA	DAKSHINA KANNADA	CHANDRASHEKAR	YESHWALATHA
4	DK236A	MORARJI RESIDENTIAL SCHOOL	MACHINA	BELTHANGADI	DAKSHINA KANNADA	SANTOSH	KEERTHI PRAMILA
5	DK237B	GOVT PUC	BELTHANGADI	BELTHANGADI	DAKSHINA KANNADA	MALINI	SUSHMA
6	DK238B	GOVT HS	GERUKATTE	BELTHANGADI	DAKSHINA KANNADA	HARISH KUMAR T S	SHAM SUNDER BHAT
7	DK239B	GOVT HS	KOKADA	BELTHANGADI	DAKSHINA KANNADA	YAMUNA	REKHA
8	DK240B	GOVT HS	PADANGADI	BELTHANGADI	DAKSHINA KANNADA	PRAMILA	HARI PRASAD
9	DK241B	GOVT HS	MOODUSHEDDE	MANGALORE	DAKSHINA KANNADA	SUNIL	ASHITHA
10	DK242A	GOVT HS	CHITRAPURA-KULAI	MANGALORE	DAKSHINA KANNADA	SUKUMAR	JAYALAKSHMI
11	DK243B	GOVT HS	KATIPALLA	MANGALORE	DAKSHINA KANNADA	SOUMYA	PAVITHRA
12	DK244A	GOVT PUC	RATHAVEEDI	MANGALORE	DAKSHINA KANNADA	POOJA	SHOBHA
13	DK245C	GOVT HS	SOMESHWARA UCCHILA	MANGALORE	DAKSHINA KANNADA	MAHESH	VIKRAM
14	DK246A	GOVT PUC	BALMATTA,MANGALORE	MANGALORE	DAKSHINA KANNADA	SUJATHA	REENA
15	DK247A	GOVT HS	HOSABETTU	MANGALORE	DAKSHINA KANNADA	USHA TANTRI	HEMALATHA
16	DK248A	MORARJI RESIDENTIAL SCHOOL	KALUBETTA	MANGALORE	DAKSHINA KANNADA	SUREKHA	SARITHA
17	DK249A	GOVT HS	NADUGODU	MANGALORE	DAKSHINA KANNADA	SUMANASHRI	PRABHA V PINTO
18	DK250B	GOVT HS	KEMRALU	MANGALORE	DAKSHINA KANNADA	MALATHI	LAVEENA
19	DK251A	MORARJI RESIDENTIAL SCHOOL	MULKI	MANGALORE	DAKSHINA KANNADA	RUBEENA BANU	MAITHRI
20	DK252B	GOVT PUC	MULKI,MANGALORE	MANGALORE	DAKSHINA KANNADA	REVAATHI	RAJANI
21	DK253B	GOVT HS	CHELLAIRU	MANGALORE	DAKSHINA KANNADA	SUMANGALA	MADUNEETHA
22	DK254C	GOVT PUC	HALEANGADI	MANGALORE	DAKSHINA KANNADA	ASHA	MALLIKA NAIR
23	DK255B	GOVT HS	KABAKA	PUTTUR	DAKSHINA KANNADA	ANIL KUMAR	SUNDAR
24	DK256B	GOVT HS	PUTTUR	PUTTUR	DAKSHINA KANNADA	GEETHA	DIVYALATHA
25	DK257C	GOVT PUC	UPPINANGADI	PUTTUR	DAKSHINA KANNADA	SHEELAVATHI	JAYALATHA
26	DK258B	GOVT HS	AJJAVAR	SULYA	DAKSHINA KANNADA	BOBBISH	GOPINATH
27	DK259B	GOVT HS	GANDINAGARA	SULYA	DAKSHINA KANNADA	NEETU	VASANTH KUMAR
28	DK260C	GOVT PUC	SULLYA	SULYA	DAKSHINA KANNADA	RAVI SHANKAR	VEENA
29	DK261C	GOVT HS	PANJA	SULYA	DAKSHINA KANNADA	NAGAMANI	VANITA KUMARI